**ಕರ್ನಾಟಕ ಸರ್ಕಾರ**

ಸಂಖ್ಯೆ: ಕಪಂರಾಅ/ಅಭಿವೃದ್ಧಿ/406 /2022(ಭಾಗ-1)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:15.12.2022.

## ಸುತ್ತೋಲೆ

**ವಿಷಯ**:- ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಆಧರಿಸಿ ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯನ್ನು **"ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್" ("ಜನರ ಯೋಜನೆ ಜನರ ಅಭಿವೃದ್ಧಿ")** ಭಾಗವಾಗಿಸಿ 2023-24ರ "ಪಂಚಾಯತ್ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವ ಬಗ್ಗೆ.

**ಉಲ್ಲೇಖ**:-1. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯ ಹೊರಡಿಸಿರುವ ಗ್ರಾಮ ಪಂಚಾಯತಿ / ತಾಲ್ಲೂಕು ಪಂಚಾಯತಿ / ಜಿಲ್ಲಾ ಪಂಚಾಯತಿ ಅಭಿವೃದ್ಧಿ ಯೋಜನೆ ಸಿದ್ಧಪಡಿಸುವ ರೂಪುರೇಷೆಯ ವರದಿ -2022.

2. ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯದ "ಸುಸ್ಥಿರ ಅಭಿವೃದ್ಧಿ ಗುರಿಗಳ ಸ್ಥಳೀಕರಣ ವರದಿ"ಯ ಅನ್ವಯ.
3. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ:ಕಪಂರಾಅ/ಅಭಿವೃದ್ಧಿ/406/2022, ಬೆಂಗಳೂರು, ದಿನಾಂಕ:26.08.2022
4. ಸಮ ಸಂಖ್ಯೆಯ ಆದೇಶ ದಿನಾಂಕ : 17.09.2022
5. ಸಮ ಸಂಖ್ಯೆಯ ಆದೇಶ ದಿನಾಂಕ:27.10.2022

****

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 309(ಬಿ)ರಡಿಯಲ್ಲಿ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಮುಂದಿನ 5 ವರ್ಷದ ದೂರದೃಷ್ಟಿ ಯೋಜನೆಯನ್ನು ಗ್ರಾಮ ಯೋಜನಾ ಸಮಿತಿ ಮತ್ತು ಗ್ರಾಮ ಪಂಚಾಯಿತಿ ಯೋಜನಾ ಸಮಿತಿಗಳ ಸಹಕಾರದೊಂದಿಗೆ ಸಿದ್ಧಪಡಿಸಬೇಕಾಗಿದೆ. ದೂರದೃಷ್ಟಿ ಯೋಜನೆಯಲ್ಲಿ 8 ಆದ್ಯತಾ ವಲಯಗಳನ್ನು ಗುರುತಿಸಲಾಗಿದ್ದು ಅದಕ್ಕೆ ಪೂರಕವಾದ ಎಲ್ಲಾ ಚಟುವಟಿಕೆಗಳನ್ನು ಯೋಜನೆಯಲ್ಲಿ ಗುರುತಿಸಿ 2023-24ನೇ ಸಾಲಿನಿಂದ 2028-29ನೇ ಸಾಲಿನವರೆಗೆ ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಲು ಉಲ್ಲೇಖಿಸಿರುವ ಕ್ರಮ ಸಂಖ್ಯೆ (3)ರ ಸರ್ಕಾರದ ಆದೇಶದಲ್ಲಿ ಮಾರ್ಗಸೂಚಿಗಳನ್ನು, ಉಲ್ಲೇಖ (4)ರ ಸರ್ಕಾರದ ಆದೇಶದಲ್ಲಿ ಗ್ರಾಮ ಮಟ್ಟದ ಹಾಗೂ ಗ್ರಾಮ ಪಂಚಾಯಿತಿ ಮಟ್ಟದ ಯೋಜನಾ ಸಮಿತಿಗಳ ರಚನೆ ಮತ್ತು ಪಾತ್ರದ ಬಗ್ಗೆ ವಿವರಣೆಯನ್ನು ಹಾಗೂ ಉಲ್ಲೇಖ (5)ರ ಸರ್ಕಾರದ ಆದೇಶದಲ್ಲಿ ಯೋಜನೆ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಕೆಲವೊಂದು ಮಾರ್ಪಾಡುಗಳನ್ನು ಮಾಡುವ ಅವಶ್ಯಕತೆ ಕಂಡುಬಂದಿದ್ದರಿಂದ ಹೆಚ್ಚುವರಿ ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಆಧರಿಸಿ ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆಯನ್ನು (Integrated Participatory Annual Action Plan) ಸಿದ್ಧಪಡಿಸಬೇಕಾಗಿರುತ್ತದೆ. ಮುಂದುವರೆದು, ಉಲ್ಲೇಖ(1)ರ ಅನ್ವಯ 2023-24ನೇ ಸಾಲಿನ ಮೂರು ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳು ತಮ್ಮ ಹಂತದ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸುವ ಸಲುವಾಗಿ **"ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್"** ಅಡಿಯಲ್ಲಿ ಸರಣಿ ಚಟುವಟಿಕೆಗಳನ್ನು ಅಭಿಯಾನದ ರೂಪದಲ್ಲಿ ಹಮ್ಮಿಕೊಳ್ಳಲು ನಿರ್ದೇಶಿಸಲಾಗಿರುತ್ತದೆ. ಈ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲು ಹಲವಾರು ಚಟುವಟಿಕೆಗಳನ್ನು ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳು ತಪ್ಪದೇ ಕೈಗೊಳ್ಳಬೇಕಿದೆ. ಈ ಅಭಿಯಾನವನ್ನು ಕೈಗೊಳ್ಳಲು ವಿವರವಾದ ಮಾರ್ಗಸೂಚಿಯನ್ನು ಹೊರಡಿಸಲಾಗಿದೆ. ಈ ವಿವರಗಳನ್ನು ಭಾರತ ಸರ್ಕಾರದ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಮಂತ್ರಾಲಯಗಳು ಸಿದ್ಧಪಡಿಸಿದ್ದು, ಇದಕ್ಕಾಗಿ ಪ್ರತ್ಯೇಕವಾದ www.gpdp.nic.in ಪೋರ್ಟಲ್‌ನಲ್ಲಿ ಪರಿವೀಕ್ಷಿಸಬಹುದಾಗಿದೆ ಮತ್ತು ಪ್ರಗತಿಯನ್ನು ಅವಲೋಕಿಸಬಹುದಾಗಿದೆ.

ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಮಿಷನ್ ಅಂತ್ಯೋದಯದ 2020ರ ಮಾಹಿತಿಯನ್ವಯ ಮತ್ತು **ಗ್ರಾಮ ಪಂಚಾಯತಿ ದೂರದೃಷ್ಟಿ ಯೋಜನೆ** ಸಿದ್ಧಪಡಿಸುವಾಗ ಗುರುತಿಸಿರುವ ಸಮಸ್ಯೆಗಳು ಅಥವಾ ಅಂಶಗಳನ್ನಾಧರಿಸಿ ಜಿಲ್ಲಾ / ತಾಲ್ಲೂಕು / ಗ್ರಾಮ ಪಂಚಾಯತಿಗಳಿಗೆ ಪೂರಕವೆನಿಸುವ ಅಂತರದ ವರದಿ ಅಥವಾ ಕೊರತೆಯನ್ನು ಗಮನಹರಿಸಿ, ಅವುಗಳನ್ನು ಪರಿಹರಿಸುವ ಅಥವಾ ಕೊರತೆಯನ್ನು ಕಡಿಮೆಗೊಳಿಸುವ ನಿಟ್ಟಿನಲ್ಲಿ ವಾರ್ಷಿಕ ಕ್ರಿಯಾ ಯೋಜನೆಯನ್ನು ರೂಪಿಸುವುದು.

ರಾಜ್ಯದಲ್ಲಿ 2015-16ನೇ ಸಾಲಿನಿಂದ ಭಾರತ ಸರ್ಕಾರದ ಆದೇಶದ ಮೇರೆಗೆ **"ನಮ್ಮ ಗ್ರಾಮ ನಮ್ಮ ಯೋಜನೆ"** ಶೀರ್ಷಿಕೆಯಡಿಯಲ್ಲಿ ಮುಂದಿನ ಸಾಲಿನ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಲು ಕ್ರಮವಹಿಸಲಾಗುತ್ತಿದೆ. ಪ್ರಸಕ್ತ ಸಾಲಿನಿಂದ **"ನಮ್ಮ ಗ್ರಾಮ ನಮ್ಮ ಯೋಜನೆ" ಶೀರ್ಷಿಕೆಯನ್ನು "ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ"** ಎಂದು ಮರು ನಾಮಕರಣ ಮಾಡಿ ಆದೇಶಿಸಿದೆ.

ಮುಂದುವರೆದು, ರಾಜ್ಯದ ಗ್ರಾಮ ಪಂಚಾಯಿತಿಗಳು ದೂರದೃಷ್ಟಿ ಯೋಜನೆಯನ್ನು ಸಿದ್ಧಪಡಿಸಲು ಈಗಾಗಲೇ ಕ್ರಮ ವಹಿಸುತ್ತಿವೆ. ಸದರಿ ಪ್ರಕ್ರಿಯೆ ಪೂರ್ಣಗೊಂಡ ನಂತರ 2023-24ನೇ ಸಾಲಿನ ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಬೇಕಾಗಿದ್ದು, ಗ್ರಾಮ ಪಂಚಾಯಿತಿ ಹಂತದ ಇತರೆ ಅಭಿವೃದ್ಧಿ ಇಲಾಖೆಗಳ ಯೋಜನೆಗಳು / ಕಾರ್ಯಕ್ರಮಗಳು / ಚಟುವಟಿಕೆಗಳು ಸೇರಿದಂತೆ ಗ್ರಾಮ ಪಂಚಾಯಿತಿಯ **ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ**ಯನ್ನು ಸಿದ್ಧಪಡಿಸಬೇಕಾಗಿದೆ. ಈ ಹಿಂದಿನಿಂದ ಸದರಿ ಪ್ರಕ್ರಿಯೆಯನ್ನು ಜನರ ಯೋಜನೆ ಜನರ ಅಭಿವೃದ್ಧಿ ಅಭಿಯಾನದ ಭಾಗವಾಗಿ ನಮ್ಮ ಗ್ರಾಮ ನಮ್ಮ ಯೋಜನೆ ಶೀರ್ಷಿಕೆಯಡಿ ರಾಜ್ಯದ ಗ್ರಾಮ ಪಂಚಾಯಿತಿಗಳು ಪ್ರತಿವರ್ಷ ಸಿದ್ಧಪಡಿಸುತ್ತಿದ್ದು, ಪ್ರಸ್ತುತ ಸಾಲಿನಿಂದ ದೂರದೃಷ್ಟಿ ಯೋಜನೆಯ ಭಾಗವಾಗಿ ವಾರ್ಷಿಕ ಯೋಜನೆಯನ್ನು ಸಿದ್ಧಪಡಿಸಲು ಆದೇಶಿಸಿದೆ.

ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವ ಸಂದರ್ಭದಲ್ಲಿ ಈ ಕೆಳಕಂಡ ಅಂಶಗಳನ್ನು ತಪ್ಪದೇ ಪಾಲಿಸಲು ಆದೇಶಿಸಿದೆ.

- ವಾರ್ಷಿಕ ಕ್ರಿಯಾ ಯೋಜನೆಯ ಎಲ್ಲಾ ಚಟುವಟಿಕೆಗಳು ಗ್ರಾಮ ಪಂಚಾಯಿತಿಯ 5 ವರ್ಷದ ದೂರದೃಷ್ಟಿ ಯೋಜನೆಯ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸುವುದು.
- ಗ್ರಾಮ ಪಂಚಾಯಿತಿಗಳು ಸಮುದಾಯದ **ಸಹಭಾಗಿತ್ವದೊಂದಿಗೆ ವಾರ್ಷಿಕ ಕ್ರಿಯಾ ಯೋಜನೆ** ಸಿದ್ಧಪಡಿಸಲು ಕ್ರಮ ವಹಿಸುವುದು.
- ಗ್ರಾಮ ಪಂಚಾಯಿತಿಯ ಎಲ್ಲಾ ಅನುದಾನದ ಮೂಲಗಳು ಒಳಗೊಂಡಂತೆ ಒಂದು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಸಿದ್ಧಪಡಿಸುವುದು.
- ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆಯಲ್ಲಿ ಇರುವಂತೆ ಗ್ರಾಮ ಪಂಚಾಯಿತಿ ಹಂತದ ಇತರೆ ಅಭಿವೃದ್ಧಿ ಇಲಾಖೆಗಳ ಅನುದಾನ/ ಯೋಜನೆಗಳು/ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ವಾರ್ಷಿಕ ಕ್ರಿಯ ಯೋಜನೆಯಲ್ಲಿ ಅಳವಡಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿ ಹಂತದಲ್ಲಿ ಕೈಗೊಳ್ಳಲಾಗುವ ಕಡಿಮೆ ಖರ್ಚಿನಲ್ಲಿ ಮಾಡುವ ಚಟುವಟಿಕೆಗಳು / ದುಡ್ಡಿಲ್ಲದೆ ಮಾಡುವ ಚಟುವಟಿಕೆಗಳನ್ನು ಗುರುತಿಸುವುದು.
- ಯೋಜನೆವಾರು ಅವಶ್ಯವಿರುವ ಚಟುವಟಿಕೆಗಳು ಕಡ್ಡಾಯವಾಗಿ ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಅಂಗವಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು.

ಮುಂದುವರೆದು, ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ನಿಗದಿಪಡಿಸಿರುವಂತೆ ತಾಲ್ಲೂಕು ಪಂಚಾಯತಿಗಳು ತಮ್ಮ ತಾಲ್ಲೂಕು ಅಭಿವೃದ್ಧಿ ಯೋಜನೆಯನ್ನು ಮತ್ತು ಜಿಲ್ಲಾ ಪಂಚಾಯತಿಗಳು ಜಿಲ್ಲಾ ಅಭಿವೃದ್ಧಿ ಯೋಜನೆಯನ್ನು 2023-24ನೇ ಸಾಲಿಗೆ ಅನ್ವಯಿಸುವಂತೆ ಈ ಕೆಳಕಂಡಂತೆ ಸಿದ್ಧಪಡಿಸಲು ಆದೇಶಿಸಿದೆ.

**ಜನರ ಯೋಜನೆ ಜನರ ಅಭಿವೃದ್ಧಿಯ ಉದ್ದೇಶಗಳು:-**

- ಗ್ರಾಮ ಪಂಚಾಯಿತಿಯು ಸಿದ್ಧಪಡಿಸಿದ 5 ವರ್ಷದ ದೂರದೃಷ್ಟಿ ಯೋಜನೆಯ ಗುರಿಗಳನ್ನು ಗಮನದಲ್ಲಿಟ್ಟುಕೊಂಡು ಸಮುದಾಯದ ಸಹಭಾಗಿತ್ವದಲ್ಲಿ ಪಂಚಾಯತ್ ಅಭಿವೃದ್ಧಿ ಯೋಜನೆಯನ್ನು ಸಿದ್ಧಪಡಿಸುವುದು.
- ಪಂಚಾಯತ್ ರಾಜ್ ಸಂಸ್ಥೆಗಳ ಎಲ್ಲಾ ಭಾಗೀದಾರರುಗಳು (ಪಂಚಾಯತ್ ರಾಜ್ ಸಂಸ್ಥೆಗಳ ಅಧಿಕಾರಿ / ಸಿಬ್ಬಂದಿಗಳು, ಇತರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿ / ಸಿಬ್ಬಂದಿಗಳು, ಸ್ವ ಸಹಾಯ ಸಂಘದ ಒಕ್ಕೂಟಗಳ ಕ್ರಿಯಾಶೀಲ ಪದಾಧಿಕಾರಿಗಳು ಅಥವಾ ಸದಸ್ಯರುಗಳು ಮತ್ತು ಸಮುದಾಯ) ಸಕ್ರಿಯವಾಗಿ ಸಂವಿಧಾನಬದ್ಧ ವೇದಿಕೆಯಾದ ಗ್ರಾಮಸಭಾದ ಸಭೆಯಲ್ಲಿ ಭಾಗವಹಿಸುವಂತೆ ಖಾತರಿಪಡಿಸುವುದು.

- ಪಂಚಾಯತ್ ರಾಜ್ ಸಂಸ್ಥೆಗಳ ಅಡಿಯಲ್ಲಿರುವ 29 ವಿಷಯಗಳಿಗೆ ಸಂಬಂಧಿಸಿದಂತೆ ಪುರಾವೆ ಆಧಾರಿತ ಪ್ರಗತಿಯನ್ನು ವಿಶ್ಲೇಷಿಸುವುದು.
- ಸಾರ್ವಜನಿಕ ಮಾಹಿತಿ ಫಲಕಗಳನ್ನು ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯತಿಗಳಲ್ಲಿ ಅಳವಡಿಸಿ, ಸರ್ಕಾರದ ವಿವಿಧ ಯೋಜನೆಗಳು, ಹಣಕಾಸು ಮತ್ತು ಇತರೆ ವಿಷಯಗಳ ಮಾಹಿತಿಯನ್ನು ಸಮುದಾಯಕ್ಕೆ ತಲುಪಿಸುವುದು.
- ಗ್ರಾಮ ಪಂಚಾಯತಿ ಹಂತದ ಇತರೆ ಎಲ್ಲಾ ಪ್ರಮುಖ ಇಲಾಖೆಗಳ ಅಧಿಕಾರಿ/ಸಿಬ್ಬಂದಿಗಳು ಸೂಕ್ತ ಮಾಹಿತಿಯೊಂದಿಗೆ ಗ್ರಾಮಸಭೆಯಲ್ಲಿ ತಪ್ಪದೇ ಭಾಗವಹಿಸಲು ಕ್ರಮವಹಿಸುವುದು.
- 2023-24ನೇ ಸಾಲಿನ ಪಂಚಾಯತ್ ಅಭಿವೃದ್ಧಿ ಯೋಜನೆಯನ್ನು ಅಂತಿಮಗೊಳಿಸಿ, ಪಂಚತಂತ್ರ 2.0 ಹಾಗೂ ಇ-ಗ್ರಾಮಸ್ವರಾಜ್ ತಂತ್ರಾಂಶದಲ್ಲಿ ಜಿಲ್ಲಾ/ತಾಲ್ಲೂಕು/ ಗ್ರಾಮ ಪಂಚಾಯತಿಗಳು ಕಡ್ಡಾಯವಾಗಿ ನಿಗದಿತ ಕಾಲಮಿತಿಯೊಳಗೆ ಅಳವಡಿಸುವುದು.

ರಾಜ್ಯದಲ್ಲಿ ಈ ಅಭಿಯಾನವನ್ನು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳಲ್ಲಿ ಪರಿಣಾಮಕಾರಿಯಾಗಿ ಸಕಲ ಪೂರ್ವತಯಾರಿಯೊಂದಿಗೆ ಆಯೋಜಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ, ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದಲ್ಲಿ ಈ ಕೆಳಗಿನ ಕೋಷ್ಟಕದಂತೆ ಮೇಲ್ವಿಚಾರಣೆ ಅಧಿಕಾರಿ/ನೋಡಲ್ ಅಧಿಕಾರಿಗಳನ್ನು ನೇಮಿಸುವ ಮೂಲಕ ಅವರುಗಳು ಕೈಗೊಳ್ಳಬೇಕಾದ ಕ್ರಮಗಳನ್ನು ವಿವರಿಸಲಾಗಿದೆ.

| ಕ್ರ ಸಂ | ವಿಷಯ / ಚಟುವಟಿಕೆ | ಹೊಣೆಗಾರಿಕೆ |
|---|---|---|
| 1 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ರಾಜ್ಯ ಮಟ್ಟದ ಮೇಲ್ವಿಚಾರಣೆ ಅಧಿಕಾರಿ | **ಅಪರ ಮುಖ್ಯ ಕಾರ್ಯದರ್ಶಿಗಳು (ಪಂ.ರಾ),** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು |
| 2 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ರಾಜ್ಯ ಮಟ್ಟದ ನೋಡಲ್ ಅಧಿಕಾರಿ | **ಜಂಟಿ ಕಾರ್ಯದರ್ಶಿಗಳು,** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು |
| 3 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ಭಾಗವಾಗಿ ಕೈಗೊಳ್ಳಬೇಕಿರುವ ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳನ್ನು ಆಯೋಜಿಸುವುದು | **ನಿರ್ದೇಶಕರು,** ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು. |

| | | |
|---|---|---|
| 4 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ಜಿಲ್ಲಾ ಮಟ್ಟದ ಮೇಲ್ವಿಚಾರಣೆ ಅಧಿಕಾರಿ | **ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,** ಜಿಲ್ಲಾ ಪಂಚಾಯತ್ |
| 5 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿ | **ಮುಖ್ಯ ಯೋಜನಾಧಿಕಾರಿ, ಜಿ. ಪಂ. ಯೋಜನಾ ನಿರ್ದೇಶಕರು, ಜಿ.ಪಂ.** |
| 6 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ತಾಲ್ಲೂಕು ಮಟ್ಟದ ಮೇಲ್ವಿಚಾರಣೆ ಅಧಿಕಾರಿ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ. ಪಂ. ಇವರು **ನಿಯೋಜಿಸಿದ ಜಿಲ್ಲಾ ಮಟ್ಟದ ಹಿರಿಯ ಅಧಿಕಾರಿಗಳು** (ಉಪಕಾರ್ಯದರ್ಶಿ, ಮುಖ್ಯ ಲೆಕ್ಕಾಧಿಕಾರಿ, ಯೋಜನಾ ನಿರ್ದೇಶಕರು, ಮುಂತಾದವರು) |
| 7 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ತಾಲ್ಲೂಕು ಮಟ್ಟದ ನೋಡಲ್ ಅಧಿಕಾರಿ | **ಕಾರ್ಯನಿರ್ವಾಹಕ ಅಧಿಕಾರಿ,** ತಾಲ್ಲೂಕು ಪಂಚಾಯತಿ |
| 8 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ಗ್ರಾಮ ಪಂಚಾಯತ್ ಮಟ್ಟದ ಮೇಲ್ವಿಚಾರಣಾಧಿಕಾರಿ | ತಾ.ಪಂ.ಯ ಕಾರ್ಯನಿರ್ವಾಹಕ ಅಧಿಕಾರಿಯು **ನಿಯೋಜಿಸಿದ ತಾಲ್ಲೂಕು ಮಟ್ಟದ ಅಧಿಕಾರಿ** (ಗ್ರಾಮ ಪಂಚಾಯತಿ ನೋಡಲ್ ಅಧಿಕಾರಿ) |
| 9 | ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ"ಗ್ರಾಮ ಪಂಚಾಯಿತಿ ಮಟ್ಟದ ನೋಡಲ್ ಅಧಿಕಾರಿ | **ಪಂಚಾಯತ್ ಅಭಿವೃದ್ಧಿ ಅಧಿಕಾರಿ,** ಗ್ರಾಮ ಪಂಚಾಯಿತಿ. |

ಮೇಲ್ಕಂಡಂತೆ, ನೇಮಿಸಲಾದ ರಾಜ್ಯ, ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿ ಮಟ್ಟದ ಅಧಿಕಾರಿ/ ಸಿಬ್ಬಂದಿಗಳಿಗೆ **ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ**"ಯ ಅನುಷ್ಠಾನದ ಜವಾಬ್ದಾರಿ ನಿರ್ವಹಣೆಯ ಬಗ್ಗೆ ಅಗತ್ಯ ತರಬೇತಿ ಕಾರ್ಯಕ್ರಮಗಳನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು ಇವರು ಆಯೋಜಿಸುತ್ತಾರೆ. ಜಿಲ್ಲಾ ಮಟ್ಟದ ಕಾರ್ಯಾಗಾರಗಳನ್ನು ಮುಖಾಮುಖಿ ಮೂಲಕ ಹಾಗೂ ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಅಧಿಕಾರಿಗಳಿಗೆ ಮುಖಾಮುಖಿ ಅಥವಾ ಉಪಗ್ರಹ ಅಥವಾ ಆನ್‌ಲೈನ್ ವಿಧಾನಗಳ ಮೂಲಕ ತರಬೇತಿಯನ್ನು ಹಮ್ಮಿಕೊಳ್ಳಲು ಆದೇಶಿಸಿದೆ. ಪ್ರಸ್ತುತ ಗ್ರಾಮ ಪಂಚಾಯತಿ ಚುನಾಯಿತ

ಸದಸ್ಯರುಗಳಿಗೆ ಮುಖಾಮುಖಿ ತರಬೇತಿಯನ್ನು ಗ್ರಾಮ ಪಂಚಾಯಿತಿ ದೂರದೃಷ್ಟಿ ಯೋಜನೆ ಸಿದ್ಧಪಡಿಸುವ ನಿಟ್ಟಿನಲ್ಲಿ ಆಯೋಜಿಸಲಾಗಿದೆ. ಅದರಲ್ಲಿ ಭಾಗವಾಗಿರುವ ವಿವಿಧ ವಲಯಗಳ ಯೋಜನೆಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ಸಂಗ್ರಹಿಸಬೇಕಾದ ಅಂಕಿ-ಅಂಶಗಳು, ಅನುಸರಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಲಾಗಿದೆ. ದೂರದೃಷ್ಟಿ ಯೋಜನೆಯ ಗುರಿಗಳನ್ನು ಗಮನದಲ್ಲಿಟ್ಟುಕೊಂಡು, ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆಯನ್ನು 2023-24ನೇ ಸಾಲಿಗೆ ಸಿದ್ಧಪಡಿಸಲು ಆದೇಶಿಸಿದೆ. ಇದೇ ರೀತಿ 2023-24ನೇ ಸಾಲಿನ ತಾಲ್ಲೂಕು ಮತ್ತು ಜಿಲ್ಲಾ ಅಭಿವೃದ್ಧಿ ಯೋಜನೆಗಳನ್ನು ಸಿದ್ಧಪಡಿಸಲು ಅಗತ್ಯ ಕ್ರಮವಹಿಸಲು ಆದೇಶಿಸಿದೆ. ಅದರೊಂದಿಗೆ ಮೂರು ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳು ಕಡ್ಡಾಯವಾಗಿ ತಾವು ಕೈಗೊಳ್ಳುವ ಪ್ರಕ್ರಿಯೆಗಳನ್ನು ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ಸಿದ್ಧಪಡಿಸಿರುವ www.gpdp.nic.in ಪೋರ್ಟಲ್‌ನಲ್ಲಿ ತಪ್ಪದೇ ಮಾಹಿತಿಯನ್ನು ಕಾಲಕಾಲಕ್ಕೆ ಇಂಧೀಕರಿಸುವುದು.

**ಮೂರು ಸ್ತರದ ಪಂಚಾಯಿತಿಗಳು ಅನುಸರಿಸಬೇಕಾದ ಚಟುವಟಿಕೆಗಳು ಮತ್ತು ಕಾಲಾವಧಿ**

| ಕ್ರ. ಸಂ | ಚಟುವಟಿಕೆ | ಕಾಲಾವಧಿ | ಹಂತ | ಜವಾಬ್ದಾರರು |
|---|---|---|---|---|
| 1. | ಅನುವುಗಾರರು (Facilitators) | 30-11-2022 | ಗ್ರಾಮ ಪಂಚಾಯತಿ | ಗ್ರಾ.ಪಂ. ಕಾರ್ಯದರ್ಶಿ/ ಎಸ್‌ಡಿಎಎ/ ಕರ ವಸೂಲಿಗಾರ |
| | | 30-11-2022 | ತಾಲ್ಲೂಕು ಪಂಚಾಯತಿ | ತಾಲ್ಲೂಕು ಯೋಜನಾಧಿಕಾರಿ/ ಸಹಾಯಕ ನಿರ್ದೇಶಕರು, ತಾ.ಪಂ. |
| | | 30-11-2022 | ಜಿಲ್ಲಾ ಪಂಚಾಯತಿ | ಪಿ.ಎ.ಇ.ಓ, ಜಿ.ಪಂ. |
| 2. | ಇತರೆ ಅಭಿವೃದ್ಧಿ ಇಲಾಖೆಯ Frontline Worker ಗಳ ಗುರುತಿಸುವಿಕೆ | 30-11-2022 | ಗ್ರಾಮ ಪಂಚಾಯತಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| | | 30-11-2022 | ತಾಲ್ಲೂಕು ಪಂಚಾಯತಿ | ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. |
| | | 30-11-2022 | ಜಿಲ್ಲಾ ಪಂಚಾಯತಿ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ |

| | | | | |
|---|---|---|---|---|
| 3. | ಗ್ರಾಮಸಭಾದ ಸಭೆಗಳ ವೇಳಾಪಟ್ಟಿ ಸಿದ್ಧಪಡಿಸುವಿಕೆ | 30-11-2022 | ಗ್ರಾಮ ಪಂಚಾಯತಿ | ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ತಾ.ಪಂ.ನ ಕಾರ್ಯನಿರ್ವಾಹಕ ಅಧಿಕಾರಿ |
| 4 | ತಾಲ್ಲೂಕು / ಜಿಲ್ಲಾ ಸಭಾ | 2022ನೇ ಡಿಸೆಂಬರ್ ಮೊದಲನೇ ವಾರದೊಳಗೆ | ತಾಲ್ಲೂಕು ಪಂಚಾಯತಿ | ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. |
| | | | ಜಿಲ್ಲಾ ಪಂಚಾಯತಿ | ಮುಖ್ಯ ಯೋಜನಾಧಿಕಾರಿ, ಜಿ.ಪಂ. |
| 5 | ಗ್ರಾಮಸಭಾದ ಸಭೆಗಳ ಆಯೋಜನೆ | **ದೂರದೃಷ್ಟಿ ಯೋಜನೆ ಅನುಮೊದನೆಗಾಗಿ** ಮೊದಲನೆ ಗ್ರಾಮ ಸಭೆ 2022ನೇ ಡಿಸೆಂಬರ್ 15ರೊಳಗಾಗಿ **ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ ಅನುಮೋದನೆಗಾಗಿ** ಎರಡನೇ ಗ್ರಾಮ ಸಭೆ – 2023ನೇ ಜನವರಿ ಎರಡನೆ ವಾರದೊಳಗಾಗಿ) | ಗ್ರಾಮ ಪಂಚಾಯತಿ | ಅಧ್ಯಕ್ಷರು, ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| 6 | ಸಭಾಗಳ ದಾಖಲೆ (ಫೋಟೋ, ವಿಡಿಯೋ, ನಡಾವಳಿ, ಇತ್ಯಾದಿ) ಇಂಧೀಕರಿಸುವಿಕೆ | ಸಭೆ ನಡೆದ ದಿನ ಅಥವಾ ಮರುದಿನದಂದು | ಗ್ರಾಮ ಪಂಚಾಯತಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| | | | ತಾಲ್ಲೂಕು ಪಂಚಾಯತಿ | ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. |
| | | | ಜಿಲ್ಲಾ ಪಂಚಾಯತಿ | ಮುಖ್ಯ ಯೋಜನಾಧಿಕಾರಿ, ಜಿ.ಪಂ. |
| 7 | ಅನುಪುಗಾರರ ವರದಿ ಅಳವಡಿಕೆ | ಸಭೆ ನಡೆದ ದಿನ ಅಥವಾ ಮರುದಿನದಂದು | ಗ್ರಾಮ ಪಂಚಾಯತಿ | ಕ್ರ.ಸಂ 1ರಲ್ಲಿ ಗುರುತಿಸಲಾದ ಅಧಿಕಾರಿ / ಸಿಬ್ಬಂದಿ |
| | | | ತಾಲ್ಲೂಕು ಪಂಚಾಯತಿ | |
| | | | ಜಿಲ್ಲಾ ಪಂಚಾಯತಿ | |

| | | | | |
|---|---|---|---|---|
| 8 | ಸಾರ್ವಜನಿಕ ಮಾಹಿತಿ ಫಲಕ (ಸರ್ಕಾರವು ನಿಗದಿಪಡಿಸಿರುವ ಮಾದರಿಯಂತೆ) | 2023ನೇ ಜನವರಿ ಮೊದಲನೇ ವಾರದೊಳಗಾಗಿ | ಗ್ರಾಮ ಪಂಚಾಯತಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| | | | ತಾಲ್ಲೂಕು ಪಂಚಾಯತಿ | ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ. |
| | | | ಜಿಲ್ಲಾ ಪಂಚಾಯತ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. |
| 9. | ಪಂಚತಂತ್ರ – 2.0 ಮತ್ತು ಜಿಪಿಡಿಪಿ ಪೋರ್ಟಲ್‌ನಲ್ಲಿ ಅಂತಿಮ ಕ್ರಿಯಾ ಯೋಜನೆಯ ಅಳವಡಿಕೆ | 2023ನೇ ಜನವರಿ 31ರೊಳಗಾಗಿ | ಗ್ರಾಮ ಪಂಚಾಯತಿ | ಪಂಚಾಯತ್ ಅಭಿವೃದ್ಧಿ ಅಧಿಕಾರಿ |
| | | 2023ನೇ ಜನವರಿ 31ರೊಳಗಾಗಿ | ತಾಲ್ಲೂಕು ಪಂಚಾಯತಿ | ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ |
| | | 2023ನೇ ಜನವರಿ 31ರೊಳಗಾಗಿ | ಜಿಲ್ಲಾ ಪಂಚಾಯತಿ | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ. |

**ಗ್ರಾಮ ಪಂಚಾಯಿತಿಯು ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆ (ಈ ಹಿಂದೆ ನಮ್ಮ ಗ್ರಾಮ ನಮ್ಮ ಯೋಜನೆ ಎಂದು ಕರೆಯಲಾಗುತ್ತಿದ್ದ)ಯನ್ನು ಸಿದ್ಧಪಡಿಸುವಾಗ ಗಮನಿಸಬೇಕಾದ ಇತರೆ ಪ್ರಮುಖ ಅಂಶಗಳು**

- 2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ಸರ್ಕಾರದ ಸುತ್ತೋಲೆಯನ್ವಯ ಸಿದ್ಧಪಡಿಸುವುದು.
- ಗ್ರಾಮ ಪಂಚಾಯಿತಿ ಹಂತದ ಅನುವುಗಾರರು ಮತ್ತು ಫ್ರಂಟ್‌ಲೈನ್ ವರ್ಕರ್ಸ್‌ಗಳನ್ನು ಗುರುತಿಸಿ ಜಿ.ಪಿ.ಡಿ.ಪಿ. ಪೋರ್ಟಲ್‌ನಲ್ಲಿ ಅಳವಡಿಸುವುದು.
- ಗ್ರಾಮ ಪಂಚಾಯತಿ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಿ, ಸ್ಥಳೀಯವಾಗಿ ಲಭ್ಯವಿರುವ ಇತರೆ ಅಭಿವೃದ್ಧಿ ಇಲಾಖೆಗಳ ಅಧಿಕಾರಿ / ಸಿಬ್ಬಂದಿಗಳೊಂದಿಗೆ ಯೋಜನೆಯನ್ನು ರೂಪಿಸಲು ಪೂರ್ವಭಾವಿ ಚರ್ಚೆ ನಡೆಸುವುದು.
- ಗ್ರಾಮಸಭಾ ಸಭೆಯ ದಿನಾಂಕವನ್ನು ಗ್ರಾಮ ಪಂಚಾಯತಿ ಕೇಂದ್ರ ಸ್ಥಾನದ ಸಭೆಯ ದಿನಾಂಕವನ್ನು ಮಾತ್ರ ಜಿಪಿಡಿಪಿ ಪೋರ್ಟಲ್‌ನಲ್ಲಿ ಅಳವಡಿಸುವುದು.
- ಸದರಿ ಕಂದಾಯ ಗ್ರಾಮವಾರು ಗ್ರಾಮಸಭೆ ಮಾಡುವ ಪೂರ್ವದಲ್ಲಿ, ಕಡ್ಡಾಯವಾಗಿ ಪ್ರತಿ ಗ್ರಾಮದ "ಗ್ರಾಮ ಬಡತನ ನಿವಾರಣಾ ಯೋಜನೆ (ವಿಪಿಆರ್‌ಪಿ)"ಯನ್ನು ಸಿದ್ಧಪಡಿಸಿಟ್ಟಿರಬೇಕು. ಸದರಿ ಗ್ರಾಮಗಳ ಗ್ರಾಮಸಭೆಯ ಮುಂದೆ ಸಮಗ್ರ ಸಹಭಾಗಿ ವಾರ್ಷಿಕ ಕ್ರಿಯಾ ಯೋಜನೆಯ ಭಾಗವಾಗಿ ತಪ್ಪದೇ 'ವಿಪಿಆರ್‌ಪಿ'ಯನ್ನು ಮಂಡನೆ ಮಾಡುವಂತೆ ಪ್ರತಿ ಗ್ರಾಮ ಪಂಚಾಯತಿಗಳು ಗಮನವಹಿಸಿ ಖಚಿತಪಡಿಸಿಕೊಳ್ಳಬೇಕು.

- ಪ್ರತಿ ಗ್ರಾಮ ಪಂಚಾಯಿತಿಯು ಕನಿಷ್ಠ ಮೂರು ಅಥವಾ ಹೆಚ್ಚಿನ ವಲಯಗಳನ್ನು ಮೀಟಿಂಗ್ ಆನ್‌ಲೈನ್ ತಂತ್ರಾಂಶದಲ್ಲಿ ಗುರುತಿಸಿ ಸಂಕಲ್ಪ ಮಾಡುವುದು.
- ಸಂಕಲ್ಪ ಮಾಡುವಾಗ ನಿರ್ಬಂಧಿತ ಹಾಗೂ ಅನಿರ್ಬಂಧಿತ ಅನುದಾನವನ್ನು ಗಮನದಲ್ಲಿಟ್ಟುಕೊಂಡು ಗುರುತಿಸುವುದು.
- ಸಂಕಲ್ಪ ಮಾಡಿರುವ ವಲಯಗಳಿಗೆ ಸಂಬAಧಿಸಿದAತೆ ಕಾರ್ಯಯೋಜನೆಯನ್ನು ರೂಪಿಸುವಲ್ಲಿ ಕನಿಷ್ಟ ಒಟ್ಟು ಅನುದಾನದ ಶೇ.30ರಷ್ಟು ಅನುದಾನವನ್ನು ಮೀಸಲಿಡುವುದು.
- 2030ನೇ ಸಾಲಿಗೆ ಸಾಧ್ಯವಾದಷ್ಟು ಸ್ಥಳೀಕರಿಸಿದ ಗುರಿಯನ್ನು ಸಾಧಿಸುವ ಆಶಯ ಹೊಂದುವುದು.
- ಕನಿಷ್ಠ ಎರಡು ಗ್ರಾಮ ಸಭೆಯ ದಿನಾಂಕಗಳನ್ನು ನಿಗದಿಪಡಿಸಿ ತಪ್ಪದೇ ನಡೆಸುವುದು. ಮೊದಲ ಸಭೆಯಲ್ಲಿ (ದೂರದೃಷ್ಟಿ ಯೋಜನೆಯ ಅನುಮೊದನೆಗೆ ಕರೆಯಲಾಗುವ ಗ್ರಾಮ ಸಭೆಯು ಆಗಿರಬಹುದು) ಗ್ರಾಮಸಭಾ ಸದಸ್ಯರುಗಳಿಗೆ ಪ್ರಕ್ರಿಯೆ ಮತ್ತು ಮಾಹಿತಿ ನೀಡುವುದು ಮತ್ತು ಎರಡನೇಯ ಸಭೆಯಲ್ಲಿ ಸದರಿ ವರ್ಷದ ವಾರ್ಷಿಕ ಕ್ರಿಯಾ ಯೋಜನೆಯನ್ನು ಅನುಮೋದನೆ ಪಡೆಯುವ ಸಲುವಾಗಿ ಆಯೋಜಿಸುವುದು. ಎರಡು ಗ್ರಾಮಸಭೆಗಳ ದಿನಾಂಕವನ್ನು ಕಡ್ಡಾಯವಾಗಿ ಜಿಪಿಡಿಪಿ ಪೋರ್ಟಲ್ ನಲ್ಲಿ ಅಳವಡಿಸಿರಬೇಕು.
- ಗ್ರಾಮ ಸಭೆಯಲ್ಲಿ ಪ್ರತಿಶತ 10ರಷ್ಟು ಮತದಾರರು ಕಡ್ಡಾಯವಾಗಿ ಭಾಗವಹಿಸಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಗ್ರಾಮ ಪಂಚಾಯಿತಿಯ ಇತರೆ ಅಭಿವೃದ್ಧಿ ಇಲಾಖೆಗಳ ಯೋಜನೆಗಳನ್ನು ಸದರಿ ಗ್ರಾಮಸಭೆಯಲ್ಲಿ ಚರ್ಚಿಸುವಂತೆ ಸೂಚಿಸುವುದು ಮತ್ತು ಚರ್ಚಿಸಿದ ಅಂಶಗಳನ್ನು ಪೋರ್ಟಲ್‌ನಲ್ಲಿ ಅಳವಡಿಸುವುದು.
- ಜಿಪಿಡಿಪಿ ಪೋರ್ಟಲ್‌ನಲ್ಲಿರುವ ಎಲ್ಲಾ ಹಂತಗಳನ್ನು ತಪ್ಪದೇ ಅನುಸರಿಸುವುದು ಮತ್ತು ಸದರಿ ಮಾಹಿತಿಗಳನ್ನು ಕಡ್ಡಾಯವಾಗಿ ಅಳವಡಿಸುವುದು.
- ಇ-ಗ್ರಾಮ್ ಸ್ವರಾಜ್ ತಂತ್ರಾಂಶದಲ್ಲಿ ಗ್ರಾಮ ಪಂಚಾಯಿತಿಯ ಇತರೆ ಅನುದಾನಗಳನ್ನು ಗಮನದಲ್ಲಿಟ್ಟುಕೊಂಡು ಯೋಜನೆ ಅಳವಡಿಸುವುದು.
- ಕಾಮಗಾರಿಗಳನ್ನು ಅಬೋರ್ಟ್ ಅಥವಾ ರಿವರ್ಟ್ ಮಾಡಿ ಹೆಚ್ಚುವರಿ ಯೋಜನೆಯನ್ನು ಸಿದ್ಧಪಡಿಸುವುದನ್ನು ಮರುಕಳಿಸದಂತೆ ಸೀಮಿತಗೊಳಿಸಿ ಮುಂದುವರಿಯುವುದು.
- ಗ್ರಾಮ ಪಂಚಾಯತಿ ಯೋಜನಾ ಸಹಾಯಕ ಸಮಿತಿ ಸಭೆಯನ್ನು ನಡೆಸಿ ಗ್ರಾಮಸಭೆಗಳ ಕರಡು ಯೋಜನೆಗಳನ್ನು ಪರಿಶೀಲಿಸುವುದು. ಈ ಸಭೆಯನ್ನು ಕಡ್ಡಾಯವಾಗಿ ಜನವರಿ ಎರಡನೇ / ಮೂರನೇ ವಾರದೊಳಗೆ ಆಯೋಜಿಸುವಂತೆ ಕ್ರಮವಹಿಸುವುದು.
- ಮೂರು ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳು ಒಗ್ಗೂಡಿಸಿ, ಕೈಗೊಳ್ಳಬಹುದಾದ ಕಾಮಗಾರಿ /ಚಟುವಟಿಕೆಗಳನ್ನು ಚರ್ಚಿಸಿ, ಅಂತಿಮಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮುಂದಾಳತ್ವ ವಹಿಸುವುದು.

**ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಯು ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವಾಗ ಗಮನಿಸಬೇಕಾದ ಅಂಶಗಳು**

- 2023-24ನೇ ಸಾಲಿನ ಕ್ರಿಯಾ ಯೋಜನೆಯನ್ನು ಸರ್ಕಾರದ ಸುತ್ತೋಲೆಯನ್ವಯ ಸಿದ್ಧಪಡಿಸುವುದು.
- ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿ ಹಂತದ ಅನುವುಗಾರರು ಮತ್ತು ಫ್ರಂಟ್‌ಲೈನ್ ವರ್ಕರ್ಸ್‌ಗಳನ್ನು ಗುರುತಿಸಿ ಜಿ.ಪಿ.ಡಿ.ಪಿ. ಪೋರ್ಟಲ್‌ನಲ್ಲಿ ಅಳವಡಿಸುವುದು.
- ನಿರ್ಬಂಧಿತ ಹಾಗೂ ಅನಿರ್ಬಂಧಿತ ಅನುದಾನವನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಚಟುವಟಿಕೆಗಳು ಮತ್ತು ಕಾಮಗಾರಿಗಳನ್ನು ಈ ಮೇಲೆ ನಿಗದಿಪಡಿಸಿರುವಂತೆ ಗುರುತಿಸುವುದು.
- ತಾಲ್ಲೂಕು ಮತ್ತು ಜಿಲ್ಲಾ ಸಭಾಗಳನ್ನು ಆಯೋಜಿಸುವ ಮೂಲಕ ಬೇಡಿಕೆಗಳನ್ನು ಸಂಗ್ರಹಿಸುವುದು ಮತ್ತು ಅಂತಹ ಸಂದರ್ಭದಲ್ಲಿ ಗ್ರಾಮಸಭೆಯಲ್ಲಿ ಬಂದಿರುವಂತಹ ಮೇಲಿನ ಹಂತದ ಬೇಡಿಕೆಗಳನ್ನು ಪ್ರಸ್ತಾಪಿಸಲು ತಾಲ್ಲೂಕು ಸಭಾದಲ್ಲಿ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರುಗಳಿಗೆ ಅವಕಾಶ ನೀಡುವುದು. ಅಂತೆಯೇ, ತಾಲ್ಲೂಕು ಪಂಚಾಯತಿಗಳ ಆಡಳಿತಾಧಿಕಾರಿಗಳಿಗೆ ಜಿಲ್ಲಾ ಪಂಚಾಯತಿ ಸಭಾದಲ್ಲಿ ಜಿಲ್ಲೆ ಅಥವಾ ಸರ್ಕಾರಕ್ಕೆ ಪ್ರಸ್ತಾಪಿಸಬಹುದಾದ ಜನರ ಬೇಡಿಕೆಗಳನ್ನು ಮಂಡಿಸಲು ಅವಕಾಶ ನೀಡುವುದು.
- ತಾಪಂ. ಮತ್ತು ಜಿ.ಪಂ.ಗಳು ಸಹ ಮೇಲೆ ತಿಳಿಸಿದ ಕ್ರಮಗಳನ್ವಯ 2023-24ನೇ ಸಾಲಿನ ಯೋಜನೆಗಳನ್ನು ಸಿದ್ಧಪಡಿಸುವುದು.
- ಜಿಪಿಡಿಪಿ ಪೋರ್ಟಲ್‌ನಲ್ಲಿರುವ ಎಲ್ಲಾ ಹಂತಗಳನ್ನು ತಪ್ಪದೇ ಅನುಸರಿಸುವುದು ಮತ್ತು ಸದರಿ
- ಮೂರು ಸ್ತರದ ಪಂಚಾಯತ್ ರಾಜ್ ಸಂಸ್ಥೆಗಳು ಒಗ್ಗೂಡಿಸಿ, ಕೈಗೊಳ್ಳಬಹುದಾದ ಕಾಮಗಾರಿ / ಚಟುವಟಿಕೆಗಳನ್ನು ಚರ್ಚಿಸಿ, ಅಂತಿಮಗೊಳಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮುಂದಾಳತ್ವ ವಹಿಸುವುದು.
- "ಜನರ ಯೋಜನೆ ಜನರ ಅಭಿವೃದ್ಧಿ"ಯ ಭಾಗವಾಗಿ ನಿರ್ವಹಿಸುವ ಎಲ್ಲಾ ತಂತ್ರಾಂಶ ಮತ್ತು ತಾಂತ್ರಿಕ ಸಹಕಾರವನ್ನು ಮತ್ತು ಮೇಲ್ವಿಚಾರಣೆಯನ್ನು ಹಾಗೂ ಅಗತ್ಯ ಮಾರ್ಗದರ್ಶನವನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಇ-ಆಡಳಿತ ವಿಭಾಗವು ನಿರ್ವಹಿಸಲು ತಿಳಿಸಿದೆ. ಇದರೊಂದಿಗೆ ಭಾರತ ಸರ್ಕಾರದ www.gpdp.nic.in ತಂತ್ರಾಂಶಕ್ಕೆ ಅಥವಾ ಇತರೆ ತಂತ್ರಾಂಶಕ್ಕೆ ಸಂಬಂಧಿಸಿದಂತೆ ಎಲ್ಲಾ ಸೂಕ್ತ ಕ್ರಮಗಳನ್ನು ಇಲಾಖೆಯ ಇ-ಆಡಳಿತ ಶಾಖೆಯು ನಿರ್ವಹಿಸುವುದು.
- "ಜನರ ಯೋಜನೆ ಜನರ ಅಭಿವೃದ್ಧಿ"ಯ ಭಾಗವಾಗಿ ಆಯೋಜಿಸಲಾಗುವ ಎಲ್ಲಾ ತರಬೇತಿ ಕಾರ್ಯಕ್ರಮಗಳಿಗೆ ತಗಲುವ ವೆಚ್ಚವನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಗೆ ರಾಷ್ಟ್ರೀಯ ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ಬಿಡುಗಡೆಯಾಗಿರುವ ಅನುದಾನದಿಂದ ಭರಿಸಲು ಆದೇಶಿಸಿದೆ.


ಮೇಲೆ ವಿವರಿಸಲಾದ ಮಾರ್ಗಸೂಚಿಯಂತೆ 2023-24ನೇ ಸಾಲಿನ ಸಮಗ್ರ ಸಹಭಾಗಿತ್ವ ವಾರ್ಷಿಕ ಕ್ರಿಯಾ ಯೋಜನೆಯನ್ನು ಒಳಗೊಂಡಂತೆ "ಜನರ ಯೋಜನೆ ಜನರ ಅಭಿವೃದ್ಧಿ" ರಾಜ್ಯದಲ್ಲಿ ಯಶಸ್ವಿಯಾಗಿ ಸಿದ್ಧಪಡಿಸಿ, ಅನುಷ್ಠಾನಗೊಳಿಸಲು ಎಲ್ಲಾ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಮೇಲ್ವಿಚಾರಣೆ ಮತ್ತು ನೋಡಲ್ ಅಧಿಕಾರಿಗಳು ಎಲ್ಲಾ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲು ಕಟ್ಟುನಿಟ್ಟಿನ ನಿರ್ದೇಶನವನ್ನು ನೀಡಿ ಆದೇಶಿಸಿದೆ.

(ಎಲ್.ಕೆ.ಅತೀಕ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬೆಂಗಳೂರು.

**ಇವರಿಗೆ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು.
2. ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು, ವಿಧಾನಸೌಧ, ಬೆಂಗಳೂರು.
3. ಎಲ್ಲಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
4. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ, ಕೆ.ಜಿ. ರಸ್ತೆ, ಬೆಂಗಳೂರು.
5. ಆಯುಕ್ತರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ, ರಾಜಾಜಿನಗರ, ಬೆಂಗಳೂರು.
6. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ, ಮೈಸೂರು
7. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಆಡಳಿತಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
8. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತಿಗಳ ಆಡಳಿತಾಧಿಕಾರಿಗಳು ಮತ್ತು ಕಾರ್ಯನಿರ್ವಾಹಕ ಅಧಿಕಾರಿಗಳು (ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
9. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಅಧ್ಯಕ್ಷರು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).

ಅನುಬಂಧ : ಸಾರ್ವಜನಿಕ ಮಾಹಿತಿ ಫಲಕದ ಮಾದರಿ (Template)



Panchayati Raj

Gram Panchayat: ..........................

Block/Taluka: ...............

District: ....................

IGD Code: ....................

State: ..................

Name of Sarpanch: ..........................

Names of Villages: ....................................

Total Population: ..........................

Population of Scheduled Caste: ...............

Population of Scheduled Tribe: ...............

| Sl. No | Scheme | Activity | Funds | Year |
|---|---|---|---|---|
| | | | | |
| | | | | |
| | | | | |
| | | | | |

Critical Gaps as per Mission Antyodaya

- 
- 
- 
- 
- 